


ಇನ್ನಿಲ್ಲದೆ ತುಯ್ಯುಹತ್ತಿತ್ತು. ವಾಂಛೆಗಳಿಲ್ಲದ ಮನಸ್ಸು ಸಾಧಿಸುವುದು, ಈ ವಯಸ್ಸಿಗೂ ಎಷ್ಟು ತ್ರಾಸೆಂದು ನನ್ನನಗೇ ಹೇಳಿಕೊಂಡೆ. ಹಿಂದೆಯೇ ಹೃಷಿಯ ನೆನಪು ಬೆಂಬತ್ತಿ ಕಾಡಿತು. ಕಣ್ಣುಗಳು ಅರಿವಿಲ್ಲದೆಯೆ ಪಸೆಗೂಡಿಕೊಂಡವು. ಕನಕದುರ್ಗೆಯ ರೂಮು ಹೊಕ್ಕು, ಅವಳ ಬಳಿಸಾರಿ ನಿಂತು ದಿಟ್ಟಿಸಿದೆ. 'ಈ ಯಾವುದರ ಗೊಡವೆಯೇ ಇರದ ನೀನೇ ಲೇಸು!' ಎಂದು ಅವಳ ಮೋರೆಯಲ್ಲಿನ ಝಲಕು ನೋಡಿ ಅನಿಸನ್ನಿಸಿ ತೋಚಿತು.

ಅಷ್ಟರಲ್ಲಿ, ರೂಮಿನ ಕದದಾಚೆ ನಿಂತು ಶ್ರವಣ್ ಹಿಂದಿನಿಂದ ಮೆಲ್ಲಗೆ ನನ್ನ ಹೆಸರೆತ್ತಿ ಕರೆದ. ಭಾರವಾದ ಮನಸ್ಸಿನಲ್ಲಿಯೇ ಅವನತ್ತ ಸರಿದೆ. ತನ್ನೆರಡೂ ಟ್ರ್ಯಾವೆಲುಬ್ಯಾಗನ್ನು ಕಟ್ಟಿಕೊಂಡು, ವಾಪಸುಹೋಗಲಿಕ್ಕೆ ಅನುವಾಗಿ ನಿಂತಂತಿತ್ತು. 'ಯೇಯ್... ಯಾಕೆ ನಿದ್ದೆ ಮಾಡಲಿಲ್ಲವಾ?' ಧ್ವನಿ ಶೇಖರಿಸಿಕೊಂಡು ಕೇಳಿದೆ. 'ನಾನು ಈಗಲೇ ವಾಪಸು ಹೋಗಬೇಕು, ಈಶ್... ಇನ್ನು ಇಲ್ಲಿರೋದು ಅಷ್ಟು ಚೆನ್ನನಿಸುತ್ತಿಲ್ಲ...' ಅಂತಂದ. ಏನಂತ ಕೇಳಿದರೂ, ಇನ್ನೂ ಇದ್ದು ಮೊದಲು ಯೋಜಿಸಿದ ಹಾಗೆ 'ನಾಳಿದ್ದೇ' ಹೊರಡಬಹುದೆಂದು, ಎಷ್ಟೆಲ್ಲ ಯಾಚಿಸಿದರೂ ಪಟ್ಟುಬಿಡದೆ, ಹೊರಟ. ಜಗತ್ತಿನಷ್ಟೂ ವೈಚಿತ್ರ್ಯ ಒಟ್ಟೇ ರಾಚಿಕೊಂಡೆರಗಿತನ್ನಿಸಿತು!

ಅರ್ಧತಾಸಿನ ಬಳಿಕ, ಕೈಫೋನಿನಲ್ಲಿ ಶ್ರವಣನ ಮೇಸೇಜು ಬೀಪಿಸಿತು. 'ಈಶ್... ನೀವು ನನ್ನನ್ನು ಕ್ಷಮಿಸಲೇಬೇಕು. ಆದರೆ ಹೊರಡುವ ಮೊದಲು ನಿಮಗೊಂದು ಸತ್ಯ ಹೇಳಬೇಕು. ಕಡೆಯದಾಗಿ ಒಮ್ಮೆ ಸಿಗುತೀರಲ್ಲವಾ? ಸೀತಾನದಿಯ ಸೇತುವೆಯ ಬಳಿ ನೀವು ಬರುವವರೆಗೂ ಕಾಯುತ್ತೇನೆ...'

ನಿಂತಲ್ಲಿಯೇ ಹೆಪ್ಪಿ, ಏನು ಮಾಡುವುದಂತ ತೋಚದೆಯೆ ಹೆಣಗುತ್ತಿರುವಾಗ, ಪೆಂಟಮ್ಮ ಕನಕದುರ್ಗೆಯ ಕೊಠಡಿಯಿಂದ ಧಣೇರ ಧಣೇರ... ಎಂದು ಒಂದೇ ಸಮ ಒರಲಿಕೊಂಡಳು.

## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ವಾಸ್ತುಶಿಲ್ಪಿ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ' ಎಂಬ ಕಥಾಸಂಕಲನಗಳನ್ನು, 'ಮಡಿಲು' ಎಂಬ ನೀಳ್ಗತೆಯನ್ನು ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಬಯಲು ಆಲಯ' ಮತ್ತು 'ಪಟ್ಟಣ ಪುರಾಣ' ಅವರ ಅಂಕಣ ಬರಹಗಳ ಪುಸ್ತಕಗಳಾದರೆ, 'ವಸ್ತಾರೆ ಪದ್ಯಗಳು', 'ವಸ್ತಾರೆ ಇನ್ನೂ 75' ಅವರ ಕವಿತೆಗಳ ಸಂಗ್ರಹಗಳಾಗಿವೆ. ವಸ್ತಾರೆ, ಬೆಂಗಳೂರಿನಲ್ಲಿ ನೆಲೆಸಿದ್ದಾರೆ.